# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 142 | Pages. 2 | Date: 08-04-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 142 - ಪುಟಗಳು : 2 - 08 ಏಪ್ರಿಲ್ 2025 ಮಂಗಳವಾರ Ph: 8762954248 ದರ : ₹1


# ನರೇಗಾ: ಜಿಲ್ಲೆಯಲ್ಲಿ ಶೇ. 104.32 ಪ್ರಗತಿ

## ರಾಜ್ಯಕ್ಕೆ 10ನೇ ಸ್ಥಾನ | 45.90 ಲಕ್ಷ ಮಾನವ ದಿನಗಳ ಸೃಷ್ಟಿ | ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2024-25ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಶೇ. 104.32 ಗುರಿ ಸಾಧಿಸಿ ರಾಜ್ಯಕ್ಕೆ 10ನೇ ಸ್ಥಾನ ಪಡೆದಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2,82,474 ಕುಟುಂಬಗಳಿಗೆ ಜಾಬ್ ಕಾರ್ಡ್ ವಿತರಿಸಲಾಗಿದೆ. ಇವುಗಳಲ್ಲಿ 1,68,437 ಕಾರ್ಡ್ ಸಕ್ರಿಯವಾಗಿದೆ.




ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

### ಶೇ. 100ಕ್ಕಿಂತ ಹೆಚ್ಚು ಗುರಿ ಸಾಧನೆ

ಜಿಲ್ಲೆಗೆ 44 ಲಕ್ಷ ಮಾನವ ದಿನಗಳ ಗುರಿ ನಿಗದಿಪಡಿಸಲಾಗಿತ್ತು. ಅದರಲ್ಲಿ ಜಿಲ್ಲೆಯಲ್ಲಿ 45.90 ಲಕ್ಷ ಮಾನವ ದಿನಗಳನ್ನು ಸೃಜಿಸಿ, ಶೇ. 104.32 ರಷ್ಟು ಪ್ರಗತಿ ಸಾಧಿಸಲಾಗಿದೆ. ಅರಕಲಗೂಡು ತಾಲ್ಲೂಕು ಶೇ. 118.07 ರಷ್ಟು ಗುರಿ ಸಾಧಿಸಿದ್ದು, 6,14,058 ಮಾನವ ದಿನಗಳ ಗುರಿಗೆ 7,25,037 ಮಾನವ ದಿನಗಳನ್ನು ಸೃಜಿಸಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ತಾಲ್ಲೂಕಾಗಿದೆ. ಚನ್ನರಾಯಪಟ್ಟಣ ತಾಲ್ಲೂಕು 9,52,478 ಮಾನವ ದಿನಗಳ ಗುರಿಗೆ 10,96,134 ಮಾನವ ದಿನಗಳನ್ನು ಸೃಜಿಸಿ ಶೇ. 115.08 ರಷ್ಟು ಪ್ರಗತಿ ಸಾಧಿಸಿದೆ. ಹಾಸನ 5,70,826 ಮಾನವ ದಿನಗಳ ಗುರಿಗೆ 6,34,280 ಮಾನವ ದಿನಗಳನ್ನು ಸೃಜಿಸಿ ಶೇ. 111.12 ರಷ್ಟು ಪ್ರಗತಿ ಸಾಧಿಸಿದೆ ಎಂದು ಹೇಳಿದರು.

ಆಲೂರು ತಾಲ್ಲೂಕು 2,64,720 ಮಾನವ ದಿನಗಳ ಗುರಿಗೆ 2,80,854 ಮಾನವ ದಿನಗಳನ್ನು ಸೃಜಿಸಿ ಶೇ. 106.09 ರಷ್ಟು ಪ್ರಗತಿ ಸಾಧಿಸಿದೆ. ಅರಸೀಕೆರೆ ತಾಲ್ಲೂಕು 7,97,488 ಮಾನವ ದಿನಗಳ ಗುರಿಗೆ 8,25,785 ಮಾನವ ದಿನಗಳನ್ನು ಸೃಜಿಸಿ ಶೇ. 104.32 ರಷ್ಟು ಪ್ರಗತಿ ಸಾಧಿಸಿದೆ.

### ಏ. 1 ರಿಂದ ಕೂಲಿ ದರ ಹೆಚ್ಚಳ

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು 2025-26ನೇ ಆರ್ಥಿಕ ವರ್ಷದಿಂದ ನರೇಗಾ ಯೋಜನೆಯ ಕೂಲಿ ದರವನ್ನು ಹೆಚ್ಚಳ ಮಾಡಿದೆ. ರಾಜ್ಯಕ್ಕೆ 2024-25ನೇ ಸಾಲಿನಲ್ಲಿದ್ದ ಕೂಲಿ ದರ 349 ರೂ.ಗಳಿಂದ 370 ರೂ.ಗೆ ಹೆಚ್ಚಿಸಿದೆ. ಅದರಿಂದ ನರೇಗಾ ಯೋಜನೆಯಡಿ ಕೂಲಿ ಬಯಸುವ ಗ್ರಾಮೀಣ ಭಾಗದ ಕೂಲಿಕಾರರಿಗೆ ನೆರವಾಗಲಿದೆ ಎಂದರು.

ನರೇಗಾ ಯೋಜನೆಯಡಿ 2024-25ನೇ ಸಾಲಿನಲ್ಲಿ 288 ಶಾಲಾ ಕಾಂಪೌಂಡ್, 23 ಅಡುಗೆ ಕೋಣೆ, 150 ಆಟದ ಮೈದಾನ, 344 ಶಾಲಾ ಶೌಚಾಲಯ ಅಭಿವೃದ್ಧಿಪಡಿಸಲಾಗಿದೆ. 4000ಕ್ಕೂ ಹೆಚ್ಚು ಕೆರೆ ಕಟ್ಟೆಗಳಿದ್ದು, ಪ್ರತಿ ವರ್ಷ ಯೋಜನೆಯಡಿ ಸೇರಿಸಿಕೊಂಡು ಅಭಿವೃದ್ಧಿಪಡಿಸಲಾಗುತ್ತಿದೆ. 2024-25ನೇ ಸಾಲಿನಲ್ಲಿ 545 ಕೆರೆಗಳ ಅಭಿವೃದ್ಧಿಪಡಿಸಲಾಗಿದೆ. ಕೆರೆಗಳಲ್ಲಿ ತುಂಬಿರುವ ಹೂಳು ತೆಗೆಯುವುದು, ಕೆರೆಗಳ ಕೋಡಿ ಇನ್ಲೆಟ್ ಹಾಗೂ ಔಟ್ಲೆಟ್‌ಗಳ ಅಭಿವೃದ್ಧಿ, ಕೆರೆ ಏರಿ ಅಭಿವೃದ್ಧಿ, ಸೋಪಾನ ಕಟ್ಟೆ ನಿರ್ಮಾಣ, ಮುಂತಾದ ಕೆಲಸಗಳನ್ನು ನಿರ್ವಹಿಸಲಾಗಿದೆ. 780 ಕಟ್ಟೆ/ಗೋಕಟ್ಟೆಗಳನ್ನು ಅಭಿವೃದ್ಧಿ ಮಾಡಲಾಗಿದೆ ಎಂದು ಹೇಳಿದರು.

### 40 ಲಕ್ಷ ಮಾನವ ದಿನಗಳ ಗುರಿ

2025-26ನೇ ಸಾಲಿಗೆ ಜಿಲ್ಲೆಗೆ 40 ಲಕ್ಷ ಮಾನವ ದಿನಗಳ ಗುರಿ ನಿಗದಿಪಡಿಸಲಾಗಿದೆ. ಅದರಂತೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಹಾಗೂ ಅನುಷ್ಠಾನ ಇಲಾಖೆಗಳಿಂದ 39438 ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ. ನರೇಗಾ ಮಾರ್ಗಸೂಚಿಯಂತೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ ಹಾಜರಿದ್ದರು.

## ಏ. 9 ರಿಂದ ಸಂಜೀವಿನಿ ಆಸ್ಪತ್ರೆಯಲ್ಲಿ ಕೃತಕ ಕೈ ಕಾಲು ಜೋಡಣೆ ಶಿಬಿರ




ಹಾಸನ: ನಗರದ ಕೆ.ಆರ್. ಪುರಂನ 5ನೇ ಅಡ್ಡ ರಸ್ತೆಯಲ್ಲಿರುವ ಸಂಜೀವಿನಿ ಸಹಕಾರಿ ಆಸ್ಪತ್ರೆ ಆವರಣದಲ್ಲಿ ಏ. 9 ರಿಂದ 11ರ ವರೆಗೆ ಉಚಿತ ಕೃತಕ ಕೈ ಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಆಫ್ ಹಾಸನ ಹೊಯ್ಸಳ ಸದಸ್ಯ ಮೋಹನ್ ಮತ್ತು ರವಿ ಚಕ್ರವರ್ತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ರೋಟರಿ ಕ್ಲಬ್ ಆಫ್ ಹಾಸನ ಹೊಯ್ಸಳ, ರೋಟರಿ ಬೆಂಗಳೂರು ಸೌತ್ ಪರೇಡ್, ಕೋರಮಂಗಲ ಘಟಕ, ಸಂಜೀವಿನಿ ಸಹಕಾರಿ ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಜೈಪುರದ ಶ್ರೀ ಭಗವಾನ್ ಮಹಾವೀರ್ ವಿಕಲಾಂಗ ಸಹಾಯಕ ಸಮಿತಿ, ಭಾರತ ಸೇವಾದಳ, ಇನ್ನರ್ ವ್ಹೀಲ್ ಕ್ಲಬ್ ಆಫ್ ಹಾಸನ್ ಹೊಯ್ಸಳ ವೈಸಿರಿ ಹಾಗು ಐ.ಎಫ್.ಎಂ.ಆರ್ ವತಿಯಿಂದ 5ನೇ ವರ್ಷದ ಉಚಿತ ಕೃತಕ ಕೈ ಕಾಲು ಜೋಡಣೆ ಶಿಬಿರ ಏರ್ಪಡಿಸಲಾಗಿದೆ ಎಂದರು.

ಫಲಾನುಭವಿಗಳಿಗೆ ಕೃತಕ ಮುಂಗೈ, ಕಾಲು ಮತ್ತು ಪೋಲಿಯೋ ಪೀಡಿತರಿಗಾಗಿ ಕ್ಯಾಲಿಪರ್ಸ್‌ಗಳನ್ನು ಉಚಿತವಾಗಿ ಅಳವಡಿಸಲಾಗುವುದು. ಹೆಚ್ಚಿನ ಮಾಹಿತಿಗೆ 9035360232 ಇಲ್ಲಿಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

ರೋಟರಿ ಕ್ಲಬ್ ಆಫ್ ಹಾಸನದ ರವಿ ಚಕ್ರವರ್ತಿ, ಅಧ್ಯಕ್ಷ ಹರೀಶ್, ಮೋಹನ್, ಅನುರಾಧ, ಅಭಿಲಾಷ, ಪ್ರಸನ್ನ, ಸಂಜೀವಿನಿ ಆಸ್ಪತ್ರೆ ಉಪಾಧ್ಯಕ್ಷ ಸುರೇಶ್, ಹಿರಿಯ ಸದಸ್ಯ ಶಿವಕುಮಾರ್ ಹಾಗೂ ಇತರರಿದ್ದರು.

## ಏ. 12-13ಕ್ಕೆ ಹಾಸನದಲ್ಲಿ ಪತ್ರಕರ್ತರ ಕ್ರಿಕೆಟ್: ಲೋಗೋ ಅನಾವರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಹಾಸನದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಕ್ರಿಕೆಟ್ ಕ್ರೀಡಾಕೂಟದ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಕಚೇರಿ ಕಾವೇರಿಯಲ್ಲಿ ಸೋಮವಾರ ಅನಾವರಣ ಮಾಡಿದರು.

ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ವು ಈ ಬಾರಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಕಾರದಿಂದ ಏ. 12 ಮತ್ತು 13ರಂದು ಕ್ರೀಡಾಕೂಟ ಏರ್ಪಡಿಸಿದೆ. ಪ್ರತಿ ಜಿಲ್ಲೆಯ ತಂಡಗಳು ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದು, ಎರಡು ದಿನ ಪತ್ರಕರ್ತರ ಕ್ರಿಕೆಟ್ ಕ್ರೀಡಾ ಹಬ್ಬ ನಡೆಯಲಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತಿಳಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತ ಹೇಮಂತ ನಿಂಬಾಳ್ಕರ್, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ, ಖಜಾಂಚಿ ವಾಸುದೇವ ಹೊಳ್ಳ, ರಾಜ್ಯ ಸಮಿತಿ ಸದಸ್ಯ ಸೋಮಶೇಖರ ಗಾಂಧಿ ಮತ್ತಿತರರು ಹಾಜರಿದ್ದರು.



### ಲಾಂಛನ ವಿಶೇಷ

ಹಾಸನದ ಕೋಮಲೇಶ್ ಅವರು ರಚಿಸಿದ ಕ್ರಿಕೆಟ್ ಕ್ರೀಡಾಕೂಟ ಲಾಂಛನವು, ಜಿಲ್ಲೆಯ ಜೀವನದಿ ಹೇಮಾವತಿ, ಹೊಯ್ಸಳ ಶಿಲ್ಪಕಲೆಯ ತವರೂರು, ಗೊಮ್ಮಟನ ನೆಲೆಬೀಡು ಎನ್ನುವುದನ್ನು ಪ್ರತಿನಿಧಿಸುತ್ತದಲ್ಲದೆ, ಮಲೆನಾಡು, ಅರೆ ಮಲೆನಾಡು, ಬಯಲುಸೀಮೆಯ ಸೊಗಡನ್ನು ಹೊಂದಿದೆ.

## ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಹೊಡೆದಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ದೋಣನಕಟ್ಟೆ ಗ್ರಾಮದಲ್ಲಿ ನಡೆದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರ ಚುನಾವಣೆ ವೇಳೆ ಜೆಡಿಎಸ್‌ನ ಎರಡು ಗುಂಪುಗಳ ನಡುವೆ ತೀವ್ರ ಮಾರಾಮಾರಿ ನಡೆದಿದೆ.

ಈ ಘಟನೆಯಲ್ಲಿ ಸಂಘದ ಕಿಟಕಿ ಗಾಜುಗಳು, ಚೇರುಗಳು ಪುಡಿಪುಡಿಯಾಗಿವೆ.

ದೋಣನಕಟ್ಟೆ ಕೃಷಿ ಪತ್ತಿನ ಸಹಕಾರ ಸಂಘವು ಒಟ್ಟು 12 ನಿರ್ದೇಶಕರನ್ನು ಹೊಂದಿದ್ದು, ಅಧ್ಯಕ್ಷ ಸ್ಥಾನಕ್ಕಾಗಿ ಜೆಡಿಎಸ್‌ನ ಇಬ್ಬರು ಆಕಾಂಕ್ಷಿಗಳಾದ ಸುಗಂಧರಾಜು ಮತ್ತು ಪರಮೇಶ್ವರಪ್ಪ ನಾಮಪತ್ರ ಸಲ್ಲಿಸಿದ್ದರು. ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಅವರು ಸುಗಂಧರಾಜು ಅವರನ್ನು ಬೆಂಬಲಿಸಿದರೆ, ಮತ್ತೋರ್ವ ಮುಖಂಡ ಶೇಖರಪ್ಪ ಅವರು ಪರಮೇಶ್ವರಪ್ಪ ಅವರನ್ನು ಬೆಂಬಲಿಸಿದ್ದರು. ನಾಮಪತ್ರ ಸಲ್ಲಿಕೆ ವೇಳೆ ಎರಡೂ ಗುಂಪುಗಳ ನಡುವೆ ವಾಗ್ವಾದ ಶುರುವಾಗಿ, ಕ್ಷಣಮಾತ್ರದಲ್ಲಿ ಜಗಳ ವಿಕೋಪಕ್ಕೆ ತಿರುಗಿ ಕೈಕೈ ಮಿಲಾಯಿಸುವ ಸ್ಥಿತಿಗೆ ತಲುಪಿತು. ಎನ್.ಆರ್. ಸಂತೋಷ್ ಅವರ ಸಮ್ಮುಖದಲ್ಲೇ ಎರಡೂ ಗುಂಪುಗಳು ಬಡಿದಾಡಿಕೊಂಡಿದ್ದು,



ಗಲಾಟೆಯನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಆದರೆ, ಗೊಂದಲದ ನಡುವೆಯೂ ಚುನಾವಣೆ ಮುಂದುವರಿದು, ಅಂತಿಮವಾಗಿ ಪರಮೇಶ್ವರಪ್ಪ ಅವರು ಜಯಭೇರಿ ಬಾರಿಸಿದರು. ಪೊಲೀಸರು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದು, ಪರಿಸ್ಥಿತಿಯನ್ನು ಶಾಂತಗೊಳಿಸಿದರು.

ಈ ಘಟನೆ ಜೆಡಿಎಸ್‌ನ ಆಂತರಿಕ ಗುಂಪುಗಾರಿಕೆ ಮತ್ತೊಮ್ಮೆ ಎತ್ತಿ ತೋರಿದಂತಾಗಿದೆ. ಬಾಣಾವರ ಠಾಣೆ ಪೊಲೀಸರು ಸ್ಥಳದಲ್ಲೇ ಠಿಕಾಣಿ ಹೂಡಿದ್ದಾರೆ.

## ಭವಾನಿ ರೇವಣ್ಣಗೆ ಅದ್ದೂರಿ ಸ್ವಾಗತ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಂತ್ರಸ್ತೆ ಕಿಡ್ನಾಪ್ ಪ್ರಕರಣದಲ್ಲಿ ಹೈಕೋರ್ಟ್‌ನಿಂದ ಜಿಲ್ಲೆಗೆ ಪ್ರವೇಶಿಸದಂತೆ ತಡೆಯಾಜ್ಞೆ ಹೊಂದಿದ್ದ ಭವಾನಿ ರೇವಣ್ಣ ಅವರು, ಹತ್ತು ತಿಂಗಳ ನಂತರ ಇಂದು ಜಿಲ್ಲೆಗೆ ಆಗಮಿಸಿದ್ದಾರೆ.

ಕಳೆದ ಶುಕ್ರವಾರ ಹೈಕೋರ್ಟ್ ಷರತ್ತು ಸಡಿಲಿಸಿದ ಹಿನ್ನೆಲೆಯಲ್ಲಿ ಅವರು ಹೊಳೆನರಸೀಪುರದ ನಿವಾಸಕ್ಕೆ ಮರಳಿದರು.

ಪ್ರಕರಣದ ತನಿಖೆಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿಯೇ ನೆಲೆಸಿದ್ದ ಭವಾನಿ ರೇವಣ್ಣ ಅವರಿಗೆ, ಹೈಕೋರ್ಟ್‌ನ ಇತ್ತೀಚಿನ ಆದೇಶದಿಂದ ಜಿಲ್ಲೆಗೆ ಮರಳಲು ಅವಕಾಶ ದೊರೆತಿದೆ.

ಜಿಲ್ಲೆಯ ಗಡಿಭಾಗವಾದ ಹಿರೀಸಾವೆ, ಚನ್ನರಾಯಪಟ್ಟಣ ಹಾಗೂ ಹೊಳೆನರಸೀಪುರಗಳಲ್ಲಿ ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಜಿಲ್ಲೆಗೆ ಪ್ರವೇಶಿಸಿದ ಸಂದರ್ಭದಲ್ಲಿ ಭವಾನಿ ರೇವಣ್ಣ ಅವರ ಜೈಕಾರ ಕೂಗಿದ ಕಾರ್ಯಕರ್ತರು, ಪಟಾಕಿ ಸಿಡಿಸುವ ಮೂಲಕ ಸಂಭ್ರಮಾಚರಣೆಯಲ್ಲಿ ತೊಡಗಿದರು.

ಹೊಳೆನರಸೀಪುರದಲ್ಲಿ ನಡೆದ ಸ್ವಾಗತ ಸಮಾರಂಭದಲ್ಲಿ ಜೆಡಿಎಸ್‌ನ ಹಲವು ಮುಖಂಡರು ಮತ್ತು ಬೆಂಬಲಿಗರು ಉಪಸ್ಥಿತರಿದ್ದರು. ಭವಾನಿ ರೇವಣ್ಣ ಅವರ ಮೇಲೆ ಹೂಮಳೆ ಸುರಿಸಿ ಅವರಿಗೆ ಆರತಿ ಎತ್ತಿ ಅಭಿಮಾನಿಗಳು ಹೊಳೆನರಸೀಪುರದ ನಿವಾಸಕ್ಕೆ ಸ್ವಾಗತಿಸಿದರು.

ಸ್ವಾಗತ ಸ್ವೀಕರಿಸಿದ ನಂತರ ಭವಾನಿ ರೇವಣ್ಣ ಅವರು ಮನೆಯ ತಾಯಿ ಬಾಗಿಲಿಗೆ ನಮಸ್ಕರಿಸಿ ಒಳ ಪ್ರವೇಶಿಸಿದರು.

> ಜಿಲ್ಲೆಯ ಜನರ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ನಾವು ಜಿಲ್ಲೆ ಬಿಟ್ಟು ಎಲ್ಲಿಗೂ ಓಡಿ ಹೋಗಿಲ್ಲ. ದೇವರು ತೋರಿದ ದಾರಿಯಲ್ಲಿ ಮುಂದೆ ನಡೆಯುತ್ತೇವೆ. ಜಿಲ್ಲೆಯ ಜನರ ಪ್ರೀತಿಗೆ ಋಣಿಯಾಗಿದ್ದೇನೆ. ಹಾಸನ ಹಾಗೂ ಮೈಸೂರಿಗೆ ಭೇಟಿ ನೀಡಲು ನ್ಯಾಯಾಲಯ ಅನುಮತಿ ನೀಡಿರುವುದು ಖುಷಿ ತಂದಿದೆ. ಅಧಿಕಾರ ಇರಲಿ ಅಥವಾ ಇಲ್ಲದಿರಲಿ ಜನಪರ ಕೆಲಸಗಳನ್ನು ಮಾಡುತ್ತೇವೆ. ಬೆಂಗಳೂರಿಗೆ ಪ್ರತಿದಿನ ಸಾಕಷ್ಟು ಜನರು ಬಂದು ಕುಶಲೋಪರಿ ವಿಚಾರಿಸಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ನೀಡಿರುವ ಪ್ರೀತಿಯನ್ನು ಜನರು ನಮಗೂ ನೀಡಿದ್ದಾರೆ. ರಾಜಕೀಯ ವಿಚಾರವಾಗಿ ಏನನ್ನೂ ಹೇಳಲು ಬಯಸುವುದಿಲ್ಲ. ದೇವರು ತೋರಿಸುವ ದಾರಿಯಲ್ಲಿ ಸಾಗುತ್ತೇವೆ
>
> - ಭವಾನಿ ರೇವಣ್ಣ

## ಏ. 12ಕ್ಕೆ ಪಂಚ ಕಲ್ಯಾಣ ಮಹಾರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಪ್ರತಿವರ್ಷದಂತೆ ಈ ಬಾರಿಯೂ ಏ. 12 ರಂದು ಭಗವಾನ್ ಶ್ರೀ 1008 ನೇಮನಾಥ ತೀರ್ಥಂಕರರ ಪಂಚಕಲ್ಯಾಣ ಮತ್ತು ಮಹಾರಥೋತ್ಸವ ನಡೆಯಲಿದೆ ಎಂದು ಶ್ರೀ ಕ್ಷೇತ್ರದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಮಾ. 31ರಿಂದ ವಿವಿಧ ಕಾರ್ಯಕ್ರಮ ಆರಂಭವಾಗಿವೆ. ಏ.12ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಮಹಾ ರಥಯಾತ್ರಾ ಮಹೋತ್ಸವ ಜರುಗಲಿದೆ. ರಾತ್ರಿ 8



ಗಂಟೆಗೆ ಶ್ರೀ ಮಠದ ಬಸದಿಯಲ್ಲಿ ಶ್ರೀ ಕೂಷ್ಮಾಂಡಿನಿ ದೇವಿಗೆ ಮಹಾ ಮಂಗಳಾರತಿ ನಡೆಯಲಿದೆ ಎಂದರು.

ಮಹೋತ್ಸವದ ದಿವ್ಯಸಾನಿಧ್ಯ ಮತ್ತು ನೇತೃತ್ವವನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಶ್ರವಣಬೆಳಗೊಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಬ್ ಪಾಷ ಭಾಗಹಿಸುವರು ಎಂದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಪ್ರಧಾನಿ ಹಾಗು ರಾಜ್ಯಸಭಾ ಸದಸ್ಯರಾದ ಹೆಚ್.ಡಿ. ದೇವೇಗೌಡ ಅವರ ಉಪಸ್ಥಿತಿ ವಹಿಸುವರು ಎಂದು ಮಾಹಿತಿ ನೀಡುವರು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಭಾಗವಹಿಸುವರು ಎಂದರು.

ಅಧ್ಯಕ್ಷತೆಯನ್ನು ಶಾಸಕ ಸಿ.ಎನ್. ಬಾಲಕೃಷ್ಣ ವಹಿಸುವರು.

## ಕಾರ್ಯಾಂಗದಲ್ಲಿ ಸರ್ಕಾರಿ ನೌಕರರ ಪಾತ್ರ ಅಧಿಕ

### ಜಿಲ್ಲಾ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ | ಸಂಸದ ಶ್ರೇಯಸ್ ಅಭಿಮತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯಾಂಗದ ಪಾತ್ರ ಮಹತ್ವವಾಗಿದ್ದು ಸರ್ಕಾರ ಹಾಗೂ ಜನರ ನಡುವೆ ಸರ್ಕಾರಿ ನೌಕರರು ಸೇತುವೆಯಾಗಿ ಕೆಲಸ ಮಾಡುತ್ತಾರೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸರ್ಕಾರಿ ನೌಕರರ ಸಂಘ, ಯುವಜನ ಸಬಲೀಕರಣ ಇಲಾಖೆ ವತಿಯಿಂದ ಸೋಮವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 2024-25ನೇ ಸಾಲಿನ ಜಿಲ್ಲಾ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಲ್ಲಿ ಸರ್ಕಾರಿ ನೌಕರರ ಪಾತ್ರ ಹೆಚ್ಚಿರುತ್ತದೆ. ಜೊತೆಗೆ ಅವರಿಗೆ ರಾಜಕೀಯ ಮುಖಂಡರು, ಮೇಲಧಿಕಾರಿಗಳ ಹಾಗು ಕೆಲಸದ ಒತ್ತಡ ಅಧಿಕವಾಗಿರುತ್ತದೆ. ಅದನ್ನೆಲ್ಲ ನಿಭಾಯಿಸಿಕೊಂಡಿರುವುದು ಕಷ್ಟದ ಕೆಲಸ. ಹೀಗಾಗಿ ಅನೇಕರು ಆರೋಗ್ಯ ಸಮಸ್ಯೆಗೆ ಗುರಿಯಾಗುತ್ತಾರೆ. ಆ ರೀತಿ ತೊಂದರೆಗೆ ಸಿಲುಕಬಾರದೆಂದರೆ ಒತ್ತಡ ರಹಿತ ಜೀವನಕ್ಕೆ ಆದ್ಯತೆ ನೀಡಬೇಕು. ಕಚೇರಿ ಅಥವಾ ಕೆಲಸ ಮಾಡುವ ಸ್ಥಳದಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಸಿಕೊಳ್ಳಬೇಕು.. ಯೋಗ, ವ್ಯಾಯಾಮ, ಧ್ಯಾನವು ಮನುಷ್ಯನನ್ನು ಉತ್ಸಾಹದಿಂದ ಇರುವಂತೆ ಮಾಡುತ್ತದೆ ಎಂದರು ಹೇಳಿದರು.



ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ವಿಚಾರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ನೌಕರರ ಏನೇ ಸಮಸ್ಯೆಗಳಿದ್ದರೂ ಗಮನಕ್ಕೆ ತರಬೇಕು. ಸ್ವಂತ ಕಚೇರಿ ಹೊಂದಲು ನೌಕರರ ಸಂಘ ಪ್ರಯತ್ನಿಸುತ್ತಿದ್ದು ಅದಕ್ಕೆ ಕೈಲಾದ ಸಹಾಯ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಕಾರ್ಯಾಂಗದ ಕೆಲಸ ಯಾವಾಗಲೂ ಒತ್ತಡದಲ್ಲೇ ಇರುತ್ತದೆ. ಮೇಲಧಿಕಾರಿ, ಜನಪ್ರತಿನಿಧಿಗಳ ಯಾವಾಗಲೂ ಇರುತ್ತದೆ. ಆರೋಗ್ಯದ ಕಡೆಗೆ ಗಮನ ಹರಿಸಬೇಕು. ನಿಮ್ಮ ವೃತ್ತಿ ದುಡಿಮೆಯನ್ನೇ ಆಧರಿಸಿ ಕುಟುಂಬ ಇರುತ್ತದೆ. ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದರು.

ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಸರ್ಕಾರಿ ನೌಕರರು ನಿಯಮಿತ ಆಹಾರ ಹಾಗೂ ನಿದ್ರೆಯನ್ನು ಅಳವಡಿಸಿಕೊಳ್ಳದಿದ್ದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಸಾರ್ವಜನಿಕ ಸೇವೆಗೆ ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಸೌಭಾಗ್ಯ. ಇನ್ನೊಬ್ಬರಿಗೆ ಕೆಡುಕು ಬಯಸದೆ, ದುರಹಂಕಾರ ತೋರಿಸದೆ ಕೆಲಸ ಮಾಡಬೇಕು. ದುರಾಸೆ, ಅಸೂಯೆ ಇಲ್ಲದಿದ್ದರೆ ಅಂತಹ ವ್ಯಕ್ತಿಯ ಮುಖದಲ್ಲಿ ಮಂದಹಾಸ ಯಾವಾಗಲೂ ಇರುತ್ತದೆ. ನಗುವುದನ್ನು ಕಲಿಯಬೇಕು ಎಂದರು.

ನೌಕರರು ರಾಜಕೀಯ ಪಕ್ಷದ ಪರ ಅಥವಾ ವಿರೋಧವಾಗಿ ಕೆಲಸ ಮಾಡಬಾರದು. ಸರ್ಕಾರಗಳ ಆಯಸ್ಸು ಐದು ವರ್ಷವಾದರೆ ನಮ್ಮದು 60 ವರ್ಷದ ವರೆಗೆ ಇರುತ್ತದೆ. ಆದ್ದರಿಂದ ರಾಜಕೀಯವನ್ನು ನಮ್ಮ ಕೆಲಸದಲ್ಲಿ ಹಸ್ತಕ್ಷೇಪ ಮಾಡದಂತೆ ಎಚ್ಚರ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, 45 ರಿಂದ 55 ವರ್ಷದೊಳಗೆ ಸರ್ಕಾರಿ ನೌಕರರು ಮರಣ ಹೊಂದುತ್ತಿದ್ದು, ಅದಕ್ಕೆ ಒತ್ತಡದ ಕೆಲಸವೇ ಕಾರಣ. ಆರೋಗ್ಯ ಕಾಪಾಡಿಕೊಳ್ಳುವುದು ಜವಾಬ್ದಾರಿ ಆಗಬೇಕು. ಕ್ರೀಡಾಕೂಟದಲ್ಲಿ ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಿ ಸೌಹಾರ್ದತೆ ಮೆರೆಯಬೇಕು ಎಂದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್. ಮಲ್ಲೇಶಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಯುವಜನ ಸಬಲೀಕರಣ ಹಾಗು ಕ್ರೀಡಾ ಇಲಾಖೆ ಉಪನಿರ್ದೇಶಕ ಹರೀಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ತಾರಾನಾಥ್, ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಭಾರ ಉಪನಿರ್ದೇಶಕ ಹೆಚ್.ಎಸ್. ಚಂದ್ರಶೇಖರ್, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾದ ಆಶಾ, ಡಾ. ಲಕ್ಷ್ಮಿಕಾಂತ್, ಪುಟ್ಟರಾಜು, ತಮ್ಮಣ್ಣಶೆಟ್ಟಿ, ಮಂಜುನಾಥ್, ವರದರಾಜು, ಜಗನ್ನಾಥಗೌಡ ಇತರರಿದ್ದರು.

# ಹೊಗೆಸೊಪ್ಪಿಗೆ ಬಂಪರ್ ಬೆಲೆ: ಸಸಿ ಮಡಿಯತ್ತ ಬೆಳೆಗಾರರ ಚಿತ್ತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಂಬಾಕಿಗೆ ಚಿನ್ನದ ಬೆಲೆ ದೊರೆತ ಕಾರಣಕ್ಕಾಗಿ ರೈತರು ಈ ಬಾರಿ ಹೊಗೆಸೊಪ್ಪು ಬೆಳೆ ಬೆಳೆಯಲು ಉತ್ಸುಕರಾಗಿದ್ದು ತಾಲ್ಲೂಕಿನಾದ್ಯಂತ ಹದ ಮಳೆ ಬಿದ್ದಿರುವ ಪರಿಣಾಮ ಸಸಿ ಮಡಿ ಬಿತ್ತನೆ ಕಾರ್ಯ ಆರಂಭಿಸಿದ್ದಾರೆ.

ಬೆಳೆಗಾರರ ಪಾಲಿಗೆ ಕೆಲ ವರ್ಷಗಳ ಕಾಲ ಕಹಿಯಾಗಿದ್ದ ಹೊಗೆಸೊಪ್ಪು ಬೆಳೆ ಈ ಸಲ ಕಲ್ಪವೃಕ್ಷವಾಗುತ್ತಿದೆ. ಹೌದು, ತಾಲ್ಲೂಕಿನ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಈ ಬಾರಿ ಹೊಗೆಸೊಪ್ಪಿಗೆ ಬಂಪರ್ ಬೆಲೆ ದೊರೆತ ಕಾರಣ ಬೆಳೆಗಾರರು ಹೊಗೆಸೊಪ್ಪು ಬೆಳೆಯತ್ತ ಹೊರಳುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಸರಾಸರಿ ದರ ಕೂಡ ಗರಿಷ್ಠ ಮಟ್ಟ ತಲುಪಿತ್ತು. ಒಂದು ಕೆಜಿ ಹೊಗೆಸೊಪ್ಪು ಕನಿಷ್ಠ 150ರಿಂದ 337 ರೂ. ತನಕ ಮಾರಾಟವಾಯಿತು. ಸರಾಸರಿ 268.90 ರೂ ದರ ದೊರೆಯಿತು. ಇದರಿಂದಾಗಿ ಹೆಚ್ಚಿನದಾಗಿ ರೈತರು ಬೆಳೆ ಬೆಳೆಯಲು ಮತ್ತಷ್ಟು ಆಸಕ್ತಿ ತೋರಿದ್ದಾರೆ.



## ಟ್ರೇ ಸಸಿ ಮಡಿ ಬಿತ್ತನೆಗೆ ಒಲವು

ತಾಲ್ಲೂಕಿನ ರಾಮನಾಥಪುರ, ಕೊಣನೂರು, ದೊಡ್ಡಮಗ್ಗೆ ಹಾಗೂ ಹಳ್ಳಿಮೈಸೂರು ಹೋಬಳಿ ಭಾಗದಲ್ಲಿ ಸಾವಿರಾರು ರೈತರು ಹೊಗೆಸೊಪ್ಪು ಬೆಳೆಯನ್ನೆ ನೆಚ್ಚಿಕೊಂಡಿದ್ದು ಬಹುತೇಕ ಭಾಗದಲ್ಲಿ ರೈತರ ಸಸಿಮಡಿ ಬೆಳೆಸಲು ಸಿದ್ದತೆ ಕೈಗೊಂಡಿದ್ದಾರೆ. ತಂಬಾಕು ಬೆಳೆ ಈ ಭಾಗಕ್ಕೆ ಕಾಲಿಟ್ಟ ಆರಂಭದಲ್ಲಿ ಹೆಚ್ಚಿನ ರೈತರು ನೀರಾವರಿ ಸೌಲಭ್ಯ ಇರುವ ಕಡೆ ಜಮೀನಿಗೆ ಬೀಜ ಬಿತ್ತಿ ನೀರು ಸಿಂಪಡಣೆ ಮಾಡಿ ಕಳೆ ತೆಗೆದು ಸಸಿ ಮಡಿ ಬೆಳೆಸುವ ಪದ್ದತಿ ಅನುಸರಿಸಿದ್ದರು. ಹಳೆಯ ಪದ್ದತಿಯಲ್ಲಿ ಸಸಿಮಡಿಗೆ ಹೆಚ್ಚಿನ ಶ್ರಮ ಹಾಕಬೇಕಿತ್ತು. ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ರೈತರು ಟ್ರೇ ಸಸಿ ಮಡಿ ಬೆಳೆಸಲು ಆಸಕ್ತಿ ವಹಿಸಿದ್ದಾರೆ. ಬಿಸಿಲಿನ ತಾಪಮಾನದಿಂದ ಸಸಿ ಮಡಿಗಳನ್ನು ರಕ್ಷಿಸಿಕೊಳ್ಳಲು ರೈತರು ಟ್ರೇ ಸಸಿ ಬಿತ್ತನೆ ಮೊರೆ ಹೋಗಿದ್ದಾರೆ. ಸಸಿ ಮಡಿಗಳನ್ನು ಟ್ರೇನಲ್ಲಿ ಬೆಳೆಸಿದರೆ ಮಳೆ ಬಿದ್ದ ತಕ್ಷಣ ನಾಟಿ ಮಾಡಿದರೆ ಗಿಡಗಳು ತೇವಾಂಶದ ಕೊರತೆ ನೀಗಿ ಬೇಗನೆ ಬೆಳವಣಿಗೆ ಕಾಣಲು ಸಾಧ್ಯವಾಗುತ್ತದೆ ಎಂಬ ಕಾರಣಕ್ಕಾಗಿ ಹೆಚ್ಚಿನ ರೈತರು ಸಸಿ ಮಡಿಗಳನ್ನು ಟ್ರೇನಲ್ಲಿ ಬೆಳೆಸಲು ಮುಂದಾಗಿದ್ದಾರೆ.

## ಮಾರುಕಟ್ಟೆ ಅಧಿಕಾರಿಗಳಿಂದ ಸಲಹೆ

ಟ್ರೇ ಸಸಿ ಮಡಿ ಬೆಳೆಸಿದರೆ ನಾಟಿ ಮಾಡಿದ ನಂತರ ಗಿಡಗಳ ಬೆಳವಣಿಗೆಗೂ ಸಹಕಾರಿಯಾಗಲಿದೆ. ತಂಬಾಕು ಗಿಡಗಳಲ್ಲಿ ಕಾಣಿಸಿಕೊಳ್ಳುವ ಸೊರಗು ರೋಗವನ್ನು ಪರಿಸರ ಸ್ನೇಹಿಯಾಗಿ ಮತ್ತು ಪರಿಣಾಮಕಾರಿಯಾಗಿ ನಿಯಂತ್ರಿಸಲು ಟ್ರೈಕೋಡರ್ಮಾ ಬಳಕೆ ಅತ್ಯವಶ್ಯಕ. ಟ್ರೇ ಮಾಡುವಾಗ ಕೋಕೋಪಿತ್ ಜತೆ ಬೆಳೆಸಿದ ಟ್ರೈಕೋಡರ್ಮಾ ಮಿಶ್ರಣದಲ್ಲಿ ತಂಬಾಕು ಸಸಿ ಬೆಳೆಸಿದರೆ ಸೊರಗು ರೋಗವನ್ನು ಟ್ರೇ ಮತ್ತು ಜಮಿನಿನಲ್ಲಿ ಹತೋಟಿಗೆ ತರಬಹುದು. ಒಂದು ಸಿಂಗಲ್ ಬ್ಯಾರನ್‌ಗೆ ನೆರಳಿನಲ್ಲಿ 3 ಕೆಜಿಯಷ್ಟು ಟ್ರೈಕೋಡರ್ಮಾ, 1 ಕೆಜಿಯಷ್ಟು ಬೇವಿನ ಹಿಂಡಿ ಮತ್ತು 50ರಿಂದ 60 ಕೆಜಿಯಷ್ಟು ಕೊಟ್ಟಿಗೆ ಗೊಬ್ಬರವನ್ನು ಮಿಶ್ರಣ ಮಾಡಿ ನೀರನ್ನು ಹಾಕಬೇಕು .ಆದರೆ ನೀರು ಹೊರಕ್ಕೆ ಹರಿಯಬಾರದು, ಹಾಗೆಯೇ ತೇವಾಂಶವನ್ನು ನಿಯಂತ್ರಣ ಮಾಡಬೇಕು. ನಂತರ ಗೋಣಿ ಚೀಲ ಮುಚ್ಚಿ ಪ್ರತಿ ದಿನ ನೀರನ್ನು ಹಾಕಿ ತೇವಾಂಶ ಸರಿಯಾಗಿರುವಂತೆ ನೋಡಿಕೊಳ್ಳಬೇಕು. 8ರಿಂದ 10 ದಿನಗಳ ನಂತರ ಬಿಳಿಯ ಬಣ್ಣದ ಪರದೆಯ ಶಿಲಿಂದ್ರದ ಬೆಳವಣಿಗೆ ಕಾಣುತ್ತದೆ. ಹೀಗೆ ಬೆಳವಣಿಗೆಯಾದ ಟ್ರೈಕೋಡರ್ಮಾವನ್ನು ಒಂದು ಚೀಲ ಕೋಕೋಪಿತ್‌ಗೆ ಒಂದು ಬಾಣಲಿಯಷ್ಟು ಬೆರೆಸಿ ಟ್ರೇ ತಯಾರು ಮಾಡಿಕೊಳ್ಳಬೇಕು. ಇದರಿಂದ ಸೊರಗು ರೋಗ ನಿಯಂತ್ರಣಕ್ಕೆ ಔಷದಿ ಸಿಂಪಡಿಸುವ ಅವಶ್ಯಕತೆ ಇರುವುದಿಲ್ಲ. ಇದರಿಂದ ರೋಗದ ನಿಯಂತ್ರಣ ಮತ್ತು ಹಣದ ಉಳಿತಾಯಕ್ಕೆ ನೆರವಾಗಲಿದೆ.. ಮುಖ್ಯವಾಗಿ ಟ್ರೇ ಮಾಡುವ 10ರಿಂದ 12 ದಿನಗಳ ಮುಂಚೆಯೇ ಟ್ರೈಕೋಡರ್ಮಾದ ಬೆಳವಣಿಗೆಯ ಕಾರ್ಯವನ್ನು ಪ್ರಾರಂಭಿಸಬೇಕು. ಟ್ರೈಕೋಡರ್ಮಾ 6 ತಿಂಗಳಿಗಿಂತ ಹಳೆಯದಾಗಿರಬಾರದು. ಆದ್ದರಿಂದ ತೆಗೆದುಕೊಳ್ಳುವಾಗ ಉತ್ಪಾದನಾ ದಿನಾಂಕವನ್ನು ಸಹ ಪರಿಶೀಲಿಸಿಕೊಳ್ಳಬೇಕು. ಟ್ರೈಕೋಡರ್ಮಾ ಬೆಳವಣಿಗೆಯಾದ ನಂತರ ಗೊಬ್ಬರದ ರಾಶಿಯನ್ನು ಗುದ್ದಲಿಯಿಂದ ಮಿಶ್ರಣ ಮಾಡಿಕೊಳ್ಳಬೇಕು ಎನ್ನುತ್ತಾರೆ ತಂಬಾಕು ಮಾರುಕಟ್ಟೆ ಅಧಿಕಾರಿಗಳು.

## 7245 ಅಧಿಕೃತ ಪರವಾನಗಿದಾರರು

ರಾಮನಾಥಪುರ ತಂಬಾಕು ಮಾರುಕಟ್ಟೆ ವ್ಯಾಪ್ತಿಯಲ್ಲಿ ಸಾವಿರಾರು ರೈತರು ಹೊಗೆಸೊಪ್ಪು ಉತ್ಪಾದಿಸುತ್ತಾರೆ. ಪ್ಲಾಟ್ ಫಾರಂ 07ರಲ್ಲಿ 4072 ರೈತರು ಅಧಿಕೃತವಾಗಿ ಪರವಾನಗಿ ಹೊಂದಿದ್ದಾರೆ.

ಪ್ಲಾಟ್ ಫಾರಂ 63ರಲ್ಲಿ 3173 ಅಧಿಕೃತ ಪರವಾನಗಿ ಹೊಂದಿದ್ದರೆ, 1320 ಕಾರ್ಡುದಾರರು ಇದ್ದಾರೆ. ಎರಡು ಪ್ಲಾಟ್ ಫಾರಂ ವ್ಯಾಪ್ತಿಯಲ್ಲಿ 10 ಸಾವಿರ ಬ್ಯಾರಲ್ ಮನೆಗಳಿದ್ದು ಈ ಬಾರಿ ಬಹುತೇಕ ಬೆಳೆಗಾರರು ಹೆಚ್ಚಿನದಾಗಿ ಹೊಗೆಸೊಪ್ಪು ಉತ್ಪಾದನೆಗೆ ಮುಂದಾಗಿದ್ದಾರೆ.

# ರೋಗಿಗಳ ಆರೈಕೆ ವೈದ್ಯರ ಆದ್ಯತೆಯಾಗಲಿ



ಸಕಲೇಶಪುರ: ಸೌಲಭ್ಯ ಹಾಗೂ ಸ್ವಚ್ಚತೆಯ ವಿಚಾರದಲ್ಲಿ ಕ್ರಾಫರ್ಡ್ ಆಸ್ಪತ್ರೆಯನ್ನು ಖಾಸಗಿ ಆಸ್ಪತ್ರೆ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು. ವೈದ್ಯರು ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಿ ಆಸ್ಪತ್ರೆಗೆ ಒಳ್ಳೆಯ ಹೆಸರು ತರಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕ್ರಾಫರ್ಡ್ ಆಸ್ಪತ್ರೆ ರಕ್ಷಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಸ್ವಚ್ಚತೆ ಹಾಗೂ ರೋಗಿಗಳಿಗೆ ಸೌಲಭ್ಯ ಕಲ್ಪಿಸುವ ವಿಚಾರದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ. ನೀರಿನ ಪೈಪ್, ವಿದ್ಯುತ್ ಲೈನ್ ಸಮಸ್ಯೆ, ಮಳೆ ನೀರಿನಿಂದ ಸೋರುತ್ತಿರುವ ಛಾವಣಿ ದುರಸ್ತಿಗೆ ಸೂಚನೆ ನೀಡಲಾಗಿದೆ. ಆಸ್ಪತ್ರೆ ಶೌಚಗೃಹಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಒಳರೋಗಿಗಳಿಗೆ ಗುಣಮಟ್ಟದ ಆಹಾರ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಸ್ಪತ್ರೆಯ ಭದ್ರತೆಗಾಗಿ ಇಬ್ಬರು ಹಂಗಾಮಿ ಸಿಬ್ಬಂದಿ ನೇಮಿಸಬೇಕು. ಆಸ್ಪತ್ರೆ ಆವರಣದಲ್ಲಿ ಖಾಸಗಿ ಆ್ಯಂಬುಲೆನ್ಸ್ ನಿಲುಗಡೆ ನಿಷೇಧಿಸಬೇಕು. ನಿಯಮ ಮೀರಿ ಯಾರಾದರೂ ವರ್ತಿಸಿದರೆ ಅಂತವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಆಸ್ಪತ್ರೆಯಲ್ಲಿ ರೇಡಿಯೋಲಾಜಿಸ್ಟ್ ಹಾಗು ಐಸಿಯು ತಜ್ಞರ ಕೊರತೆ ಇದೆ. ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಮಲೆನಾಡು ಎಂಬ ಕಾರಣಕ್ಕೆ ವೈದ್ಯರು ಇಲ್ಲಿಗೆ ಬರಲು ಹಿಂದೇಟು ಹಾಕುತ್ತಾರೆ. ಖಾಸಗಿ ವೈದ್ಯರನ್ನಾದರೂ ಇಲ್ಲಿಗೆ ನೇಮಿಸುವಂತೆ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್‌ಕುಮಾರ್ ಅವರಿಗೆ ಸೂಚಿಸಿದರು.

# ನಗರದಲ್ಲಿ ಇಂದು ಬಿಜೆಪಿ ಜನಾಕ್ರೋಶ ಯಾತ್ರೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಗತ್ಯ ವಸ್ತುಗಳ ಬೆಲೆ ಏರಿಕೆ ಹಾಗೂ 18 ಶಾಸಕರ ಅಮಾನತು ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ಕೈಗೊಂಡಿರುವ ಜನಾಕ್ರೋಶ ಯಾತ್ರೆ ಏ. 8ರ ಮಂಗಳವಾರ ನಗರದಲ್ಲಿ ನಡೆಯಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏ. 8ರ ಮಧ್ಯಾಹ್ನ 3 ಗಂಟೆಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ. ಗೌಡ, ಶಾಸಕರಾದ ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು ಸೇರಿ ಇನ್ನಿತರ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದರು.

ತಾಲ್ಲೂಕು ಕಚೇರಿಯಿಂದ ಬಿಎಂ ರಸ್ತೆಯಲ್ಲಿ ಪಾದಯಾತ್ರೆ ನಡೆಸಲಾಗುವುದು. ಎನ್.ಆರ್. ವೃತ್ತದ ಮೂಲಕ ಹೇಮಾವತಿ ಪ್ರತಿಮೆ ತಲುಪಿ ನಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗುವುದು.

ಜಿಲ್ಲೆಯ 5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದ ಬಡವರ ಗೋಳು ಹೇಳತೀರದಾಗಿದೆ. ಪೆಟ್ರೋಲ್, ಡೀಸೆಲ್, ಹಾಲು, ಮೊಸರಿನ ದರ ಗಗನಕ್ಕೇರಿದೆ. ಗ್ಯಾರಂಟಿಗೆ ಮಾತ್ರ ಆದ್ಯತೆ ನೀಡುತ್ತಿರುವ ಸರ್ಕಾರ ಬಡವರ ರಕ್ತ ಹೀರುತ್ತಿದೆ. ಎಲ್ಲಾ ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ ಎಂದರು.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರೇ ವಿಧಾನಸಭೆಯಲ್ಲಿ ಹನಿಟ್ರ್ಯಾಪ್ ವಿಚಾರ ಪ್ರಸ್ತಾಪಿಸಿದ್ದರು. ಈ ಸಂಬಂಧ ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿದ ಬಿಜೆಪಿಯ 18 ಶಾಸಕರನ್ನು ಅಮಾನತು ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಳ್ಳಿ ಇಟ್ಟಿದೆ. ಕಾಂಗ್ರೆಸ್‌ನ ದುರಾಡಳಿತವನ್ನು ರಾಜ್ಯದ ಪ್ರತಿಯೊಬ್ಬರಿಗು ತಿಳಿಸಲು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಹುಡಾ ಮಾಜಿ ಅಧ್ಯಕ್ಷ ನವಿಲೆ ಅಣ್ಣಪ್ಪ, ಬಿಜೆಪಿ ನಗರಾಧ್ಯಕ್ಷ ಯೋಗೇಶ್ ಗೌಡ (ಮಂಜು), ಪಕ್ಷದ ಮುಖಂಡರಾದ ರಾಜಕುಮಾರ್, ರಾಜೀವ್, ಹರ್ಷಿತ್ ಇತರರಿದ್ದರು.

# ಪ್ರಧಾನ ಮಂತ್ರಿ ಆವಾಸ್ ಯೋಜನೆ: ಫಲಾನುಭವಿಗಳ ಸರ್ವೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಕ್ಕೂ ಸುಸಜ್ಜಿತ ಸೂರು ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪ್ರಧಾನ್ ಮಂತ್ರಿ ಆವಾಸ್ ಯೋಜನೆಯಡಿ ನಿವೇಶನ ರಹಿತರ ಸರ್ವೆ ಆರಂಭಿಸಲಾಗಿದೆ.

2025ರ ಫೆ. 15 ರಿಂದ ಸರ್ವೆ ಕಾರ್ಯ ಗ್ರಾಮ ಪಂಚಾಯಿತಿವಾರು ನಡೆಯುತ್ತಿದ್ದು ಪ್ರತಿ ಗ್ರಾಮಗಳ ಮಾಹಿತಿ ತಲುಪಿದ ಬಳಿಕ ಜಿಲ್ಲಾ ಪಂಚಾಯಿತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಲಿದೆ. ಈ ಹಿನ್ನೆಲೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಿಲ್ಲೆಯ ಎಂಟು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ಸಭೆ ನಡೆಸಿ ಅರ್ಹ ಫಲಾನುಭವಿಗಳ ಗುರುತಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ. ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಫಲಾನುಭವಿಗಳಿಗೆ 1.75 ಲಕ್ಷ ರೂ. ಮತ್ತು ಸಾಮಾನ್ಯ ವರ್ಗದವರಿಗೆ 1.20 ಲಕ್ಷ ರೂ. ವರೆಗೆ ಸರ್ಕಾರದ ಸಹಾಯಧನ ದೊರೆಯಲಿದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಎಲ್ಲಾ ವರ್ಗದ ಬಡಕುಟುಂಬಗಳಿಗೆ ಈ ಯೋಜನೆಯ ಮೂಲಕ ಪಕ್ಕಾ ಮನೆ ನಿರ್ಮಾಣ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.




## ಕಳೆದ ವರ್ಷ ಶೇ. 27 ಸಾಧನೆ

2028ರ ವೇಳೆಗೆ ದೇಶದ ಬಡವರಿಗೆ ಮನೆ ನಿರ್ಮಿಸಿಕೊಡುವುದು ಕೇಂದ್ರ ಸರ್ಕಾರದ ಗುರಿಯಾಗಿದೆ. ಅದಕ್ಕಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಜಾರಿಗೊಳಿಸಲಾಗಿದೆಯಾದರೂ 2024-25ನೇ ಸಾಲಿನ ಪ್ರಗತಿ ತೀರಾ ನಿರಾಶಾದಾಯಕವಾಗಿದೆ. ಈ ಸಮಸ್ಯೆಗಳ ನಡುವೆ ಜಿಲ್ಲಾ ಪಂಚಾಯಿತಿ 2025-26ನೇ ಸಾಲಿಗೆ ಕ್ರಿಯಾ ಯೋಜನೆ ರೂಪಿಸಲು ಮುಂದಾಗಿದೆ.

2024 ಏ. 1 ರಿಂದ 2025ರ ಜ. 31ರ ಮಾಹಿತಿ ಪ್ರಕಾರ ನಿಗದಿಯಾಗಿದ್ದ 139.4 ಕೋಟಿ ರೂ. ಬಿಡುಗಡೆಯಾಗಿದ್ದರೂ ಖರ್ಚಾಗಿರುವುದು ಕೇವಲ 38.8 ಕೋಟಿ ರೂ. ಮಾತ್ರ. ಆಲೂರಿನಲ್ಲಿ ಶೇ. 20, ಅರಸೀಕೆರೆ ಶೇ. 27, ಅರಕಲಗೂಡು ಶೇ. 36, ಬೇಲೂರು ಶೇ. 4, ಚನ್ನರಾಯಪಟ್ಟಣ ಶೇ. 6, ಹಾಸನ ಶೇ. 53, ಹೊಳೆನರಸೀಪುರ ಶೇ. 32, ಸಕಲೇಶಪುರ ತಾಲ್ಲೂಕಿನಲ್ಲಿ ಶೇ. 29 ರಷ್ಟು ಗುರಿ ಸಾಧಿಸಲಾಗಿದೆ.

## ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆಗಳು

ಯೋಜನೆಯ ಸದುಪಯೋಗ ಪಡೆಯಲು ಇಚ್ಛಿಸುವವರು ಹತ್ತಿರದ ಗ್ರಾಮ ಪಂಚಾಯಿತಿಗೆ ಬಿಪಿಎಲ್ ಕಾರ್ಡ್, ಪಡಿತರ ಚೀಟಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ನರೇಗಾ ಉದ್ಯೋಗ ಚೀಟಿ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಮೊಬೈಲ್ ಸಂಖ್ಯೆಯನ್ನು ನೀಡಬೇಕು.

## ಅರ್ಹರಿಗೆ ಸಿಗದ ಸವಲತ್ತು

ಬಹುತೇಕ ಗ್ರಾಮಗಳಲ್ಲಿ ವಾಸಿಸಲು ಮನೆಯಿಲ್ಲದೆ ಪರದಾಡುತ್ತಿರುವ ಕುಟುಂಬಗಳು ಸಾಕಷ್ಟಿವೆ. ಓದು ಬರಹ ಬಾರದ ಅನೇಕ ಕುಟುಂಬಗಳು ಸಕಾಲಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ.

ಒಂದು ವೇಳೆ ಸ್ವಂತ ಮನೆಗಾಗಿ ವಿದ್ಯಾವಂತರ ಸಲಹೆ ಪಡೆದು ಗ್ರಾಮ ಪಂಚಾಯಿತಿ ಮೆಟ್ಟಿಲೇರಿದರೂ ಅಧಿಕಾರಿಗಳ ನಿರ್ಲಕ್ಷ್ಯ ಹಾಗು ಲಂಚಾದಹಕ್ಕೆ ಬೇಸತ್ತು ಯೋಜನೆಯಿಂದ ವಿಮುಖರಾಗುತ್ತಿದ್ದಾರೆ.

ಸರ್ಕಾರದ ಯೋಜನೆ ಸಾಕಾರಗೊಳ್ಳಬೇಕೆಂದರೆ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಪಾರದರ್ಶಕತೆ ಕಾಯ್ದುಕೊಳ್ಳಬೇಕಿದೆ. ರಾಜಕೀಯ ಲಾಬಿಗೆ ಮಣಿಯದೆ ಸೂರಿಲ್ಲದವರಿಗೆ ಅವಕಾಶ ಒದಗಿಸಿಕೊಡಬೇಕಿದೆ.

# ಏಕಾಗ್ರತೆ ವೃದ್ಧಿಗೆ ಚೆಸ್ ಸಹಕಾರಿ: ರವಿಕುಮಾರ್

ಹಾಸನ: ಚೆಸ್ ಬುದ್ದಿಶಕ್ತಿ ಹೆಚ್ಚಿಸುವ ಮಹತ್ವದ ಕ್ರೀಡೆಯಾಗಿದ್ದು ವಿದ್ಯಾರ್ಥಿಗಳು ಆಸಕ್ತಿ ವಹಿಸಿದರೆ ಏಕಾಗ್ರತೆ ವೃದ್ಧಿಗೆ ನೆರವಾಗುತ್ತದೆ ಎಂದು ರಾಯಲ್ ಅಪೊಲೋ ಶಾಲೆಯ ಪ್ರಾಂಶುಪಾಲ ಡಾ. ರವಿಕುಮಾರ್ ಹೇಳಿದರು.

ನಗರದ ರಾಯಲ್ ಅಪೊಲೋ ಶಾಲೆಯಲ್ಲಿ ಭಾನುವಾರ ಜಿಲ್ಲಾ ಚೆಸ್ ಅಸೋಸಿಯೇಷನ್ ಹಾಗೂ ಕದಂಬ ಚೆಸ್ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ವಾರ್ಷಿಕ ಪರೀಕ್ಷೆ ಮುಕ್ತಾಯವಾಗಿ ವಿದ್ಯಾರ್ಥಿಗಳು ರಜೆಯಲ್ಲಿದ್ದಾರೆ. ಈ ಅವಧಿಯನ್ನು ವ್ಯರ್ಥ ಮಾಡದೆ ಕ್ರೀಡೆಗೆ ಮೀಸಲಿಡಬೇಕು. ಜಿಲ್ಲಾ ಮಟ್ಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಗೆಲುವು ತಮ್ಮದಾಗಿಸಿಕೊಳ್ಳುವ ಮೂಲಕ ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಹೆಸರು ಗಳಿಸಬೇಕೆಂದು ಶುಭ ಹಾರೈಸಿದರು.





ಚೆಸ್ ಆಡುವುದರಿಂದ ಮಕ್ಕಳಲ್ಲಿ ಏಕಾಗ್ರತೆ ಹಾಗು ಕ್ರೀಡಾಭಿಮಾನ ಹೆಚ್ಚುತ್ತದೆ. ಆತ್ಮವಿಶ್ವಾಸವೂ ವೃದ್ಧಿಯಾಗುತ್ತದೆ ಎಂದು ಹೇಳಿದರು.

# ವಿದ್ಯಾರ್ಥಿಗಳು ಸಾಹಿತ್ಯ ಅಭಿರುಚಿ ಬೆಳೆಸಿಕೊಳ್ಳಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿದ್ಯಾರ್ಥಿಗಳು ಪಠ್ಯ ಪುಸ್ತಕ ಅಧ್ಯಯನ ಜೊತೆಗೆ ಸಾಹಿತ್ಯ ಪ್ರೇಮ ಬೆಳೆಸಿಕೊಂಡರೆ ವ್ಯಕ್ತಿತ್ವ ವಿಕಸನಕ್ಕೆ ನೆರವಾಗುತ್ತದೆ ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವಿಭಾಗ ಸಹ ಸಂಯೋಜಕ್ ನಾಗೇಂದ್ರ ಕಟ್ಟೇಮನೆ ಹೇಳಿದರು.

ನಗರದ ಅಧ್ಯಯನ ಪಿಯು ಕಾಲೇಜಿನಲ್ಲಿ ಇತ್ತೀಚೆಗೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿಯಿಂದ ಹಮ್ಮಿಕೊಂಡಿದ್ದ ಯುಗಾದಿ ಉತ್ಸವದಲ್ಲಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಕಾಲೇಜು ಶಿಕ್ಷಣವೆಂದರೆ ಅಂಕ ಪಡೆಯುವುದಕ್ಕೆ ಮಾತ್ರ ಸೀಮಿತ ಎಂಬಂತಾಗಿದೆ. ಒಳ್ಳೆಯ ಉದ್ಯೋಗ ಸಿಕ್ಕರೆ ಜೀವನ ಸಾರ್ಥಕ ಎಂಬ ಮನೋಭಾವ ಬೆಳೆದಿದೆ. ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು ಒಳ್ಳೆಯ ಅಂಕ, ಉದ್ಯೋಗ ನೆರವಾಗುತ್ತವೆ. ಅದರ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಂಡರೆ ವಿದ್ಯಾರ್ಥಿ ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗುತ್ತದೆ. ರಾಷ್ಟ್ರಕವಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದ.ರಾ. ಬೇಂದ್ರೆ, ಎಸ್. ಎಲ್. ಭೈರಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತಿತರರ ಸಾಹಿತ್ಯ ಕೃತಿಗಳನ್ನು ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಓದಬೇಕು. ಓದು ಮನುಷ್ಯನನ್ನು ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೆಪಿಸುತ್ತದೆ ಎಂದರು.



ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಿಷಯಗಳಿಗೆ ಸಂಬಂಧಿಸಿ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮತ್ತು ಆಶುಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಯಿತು. ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಪದಾಧಿಕಾರಿಗಳಾದ ಎನ್.ಆರ್. ಪ್ರಶಾಂತ್, ಡಾ. ಯೋಗೇಶ್, ವರುಣ್, ಕಾಲೇಜಿನ ಆಡಳಿತ ಮಂಡಳಿ ಸಿಬ್ಬಂದಿ ಇದ್ದರು.

# ಇತಿಹಾಸದಲ್ಲಿ ಈ ದಿನ

ದಿನಾಂಕ : ಏಪ್ರಿಲ್-8

- 217 ಎಡಿ - ರೋಮನ್ ಚಕ್ರವರ್ತಿ ಕ್ಯಾರೆಕಲ್ಲಾ ಹತ್ಯೆಯಾದ ದಿನ.
- 1904- ಎಂಟ್‌ಎಂಟೆ ಕೋರ್ದಿಯಾಲೆ ಒಪ್ಪಂದ (Caracalla): ಬ್ರಿಟನ್ ಮತ್ತು ಫ್ರಾನ್ಸ್ ನಡುವೆ ಸಹಕಾರ ಒಪ್ಪಂದಕ್ಕೆ ಸಹಿಯಾಗಿತ್ತು. ಇದು ಮುಂದಿನ ವಿಶ್ವಯುದ್ಧಗಳ ಹೊಸ್ತಿಲಲ್ಲಿ ಮಹತ್ವಪೂರ್ಣ ಅಂತಾರಾಷ್ಟ್ರೀಯ ರಾಜಕೀಯ ಬೆಳವಣಿಗೆಯಾಗಿತ್ತು.
- 1913-17ನೇ ಅಮೆಂಡ್ಮೆಂಟ್ ಅಮೆರಿಕದ ಸಂವಿಧಾನದಲ್ಲಿ ಅಂಗೀಕೃತವಾಯಿತು. ಇದರ ಮೂಲಕ ಅಮೆರಿಕದ ಸೈನೆಟ್ ಸದಸ್ಯರನ್ನು ನೇರವಾಗಿ ಜನರು ಆಯ್ಕೆಮಾಡುವ ವ್ಯವಸ್ಥೆ ಬಂತು.
- 1946-ಬುದ್ಧಿ ಮತ್ತು ಅಧ್ಯಯನದ ಪ್ರಪಂಚದಲ್ಲಿ ಪ್ರಮುಖ ಹೆಸರು ಜುವಾನ್ ಪೆರೋನ್ ಅರ್ಜೆಂಟೀನಾದ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದರು.
- 1974- ಹ್ಯಾಂಕ್ ಆ್ಯರನ್, ಅಮೆರಿಕನ್ ಬೇಸ್ಬಾಲ್ ಆಟಗಾರ, ಬೇಬ್ ರೂತ್‌ನ ಹೋಮ್ ರನ್ ದಾಖಲೆಯನ್ನು ಮುರಿದರು.
- 2005- ಪೋಪ್ ಜಾನ್ ಪಾಲ್ ಅವರ ಅಂತ್ಯಕ್ರಿಯೆಯ ದಿನ. ವಿಶ್ವದಾದ್ಯಂತ ಲಕ್ಷಾಂತರ ಜನರು ಪಾಲ್ಗೊಂಡಿದ್ದರು.
- 2013- ಮಾರ್ಗರೆಟ್ ಥ್ಯಾಚರ್, ಬ್ರಿಟನ್‌ನ ಮೊದಲ ಮಹಿಳಾ ಪ್ರಧಾನಮಂತ್ರಿ ನಿಧನರಾದರು.

# ಬಾಲ್ಯ ಅದೆಷ್ಟು ಚೆಂದವಿತ್ತು ನೆನಪಿದೆಯಾ?

– ರಜನೀಶ್ ಸಾಗರ

ಎಂಬತ್ತು, ತೊಂಬತ್ತರ ದಶಕಗಳಲ್ಲಿ ವಾರ್ಷಿಕ ಪರೀಕ್ಷೆ ಮುಗಿಯುವ ದಿನಕ್ಕೆ ಮೊದಲೇ ಸೋದರ ಮಾವ ಇಲ್ಲ ಚಿಕ್ಕಮ್ಮಂದಿರು ಮನೆಗೆ ಬಂದಿರುತ್ತಿದ್ದರು. ಆವಾಗೆಲ್ಲ ಪತ್ರಗಳ ಕಾಲ,ಲ್ಯಾಂಡ್ ಲೈನ್ ಫೋನ್ ಆಗರ್ಭ ಸಿರಿವಂತರ ಮನೆಗಳಲ್ಲಿ ಮಾತ್ರ ಇದ್ದ ಸಮಯ. ಪತ್ರ ಮುಖೇನ ಪರೀಕ್ಷೆ ಮುಗಿಯುವ ದಿನದ ಮಾಹಿತಿ ದೊರಕುತ್ತಿದ್ದ ಕಾರಣ, ಮೊದಲೇ ಮನೆಗೆ ನಮ್ಮನ್ನು ಊರಿಗೆ ಕರೆದೊಯ್ಯಲು ಬಂದಿರುತ್ತಿದ್ದರು. ನಮಗೋ ಪರೀಕ್ಷೆ ಯಾವಾಗ ಮುಗಿಯುತ್ತದೆ. ಯಾವಾಗ ಊರಿಗೆ ಹೊರಡುವುದೊ ಎಂದು ಕಾತುರದಿಂದ ಕಾಯುತ್ತಿದ್ದೆವು.

ಪರೀಕ್ಷೆ ಮುಗಿಸಿ ಬಂದವರೇ ಕೈ ಚೀಲಗಳಲ್ಲಿ ಬಟ್ಟೆ ಬರೆ ತುಂಬಿಕೊಂಡು ಬರೋಬ್ಬರಿ ಎರಡೂವರೆ ತಿಂಗಳ ಸುದೀರ್ಘ ರಜೆಯ ಮಜಾ ಅನುಭವಿಸುತ್ತಿದ್ದೆವು. (ನಾವು ಅಜ್ಜ ಅಜ್ಜಿ ಮನೆಯಿಂದ ಅಳುತ್ತಳುತ್ತ ವಾಪಾಸ್ಸು ಶಾಲೆಗೆ ಬರುವ ವೇಳೆಗೆ ಜೂನ್ ಇಪ್ಪತ್ತು ದಾಟಿರುತಿತ್ತು!)

ನಮ್ಮ ದಿನಚರಿ ಆರಂಭವಾಗುತ್ತಿದ್ದದ್ದು ಮುಖ ತೊಳೆದು, ಬೆಲ್ಲದ ಟೀ ಕುಡಿದು, ನೀರಿಗೆ ಬಹಳ ತತ್ವಾರವಿದ್ದ ಕಾರಣ ಮನೆಯಲ್ಲಿನ ಹಂಡೆ ತೊಟ್ಟಿಗಳನ್ನು ಊರಲ್ಲಿದ್ದ ಮೂರು ಬಾವಿಗಳಿಂದ ನೀರು ಸೇದಿ ತಂದು ತುಂಬಿಸಬೇಕಾಗಿತ್ತು. ಏಳೆಂಟು ವರ್ಷದ ಹುಡುಗರಿಗೆಲ್ಲಾ ಈಗಿನ ಕಾಲದ ಪ್ಲಾಸ್ಟಿಕ್ ಗಾತ್ರದ ತಾಮ್ರದ ಕೊಡಪಾನಗಳು, ದೊಡ್ಡವರಿಗಾದರೆ ಭೀಮ ಗಾತ್ರದ ತಾಮ್ರದ ಕೊಡಪಾನಗಳು. ಎರಡು ಸಿಹಿನೀರಿನ ಬಾವಿಗಳಾದರೆ, ಒಂದು ಉಪ್ಪುನೀರಿನ ಬಾವಿ. ಉಪ್ಪು ನೀರಿನ ಬಾವಿಯ ನೀರು ಪಾತ್ರೆ, ಬಟ್ಟೆ ತೊಳೆಯಲು, ನೆಲ ಒರೆಸಲು ಮಾತ್ರ ಬಳಕೆಯಾಗುತಿತ್ತು. ಅಡುಗೆಗೆ, ಕುಡಿಯಲು ಮತ್ತು ಸ್ನಾನ ಮಾಡಲು ಸಿಹಿ ನೀರಿನ ಬಾವಿಗಳ ನೀರು ಬಳಕೆಯಾಗುತಿತ್ತು. ಕಿಲೋ ಮೀಟರಗಟ್ಟಲೇ ದೂರವಿದ್ದ ಬಾವಿಗಳಿಂದ ನೀರು ತಂದು ತುಂಬಿಸುವ ವೇಳೆಗೆ ಬಿಸಿ, ಬಿಸಿ ರಾಗಿ ಮುದ್ದೆ, ಅನ್ನ ಸಾರು ತಯಾರಾಗಿರುತಿತ್ತು. ಅಪರೂಪಕ್ಕೆ ತಿಂಡಿಯೂ ಇರುತಿತ್ತು. ಹಾಲು ಹೈನಿಗೆ ಬರವಿಲ್ಲದ್ದರಿಂದ ರಾತ್ರಿಯ ಅನ್ನ ಉಳಿದರೆ ಗಟ್ಟಿ ಮೊಸರು, ಉಪ್ಪು ಹಾಕಿ, ಕಲಸಿಕೊಂಡು ಉಂಡರೆ ಹೊಟ್ಟೆ ತಂಪಾಗಿರುತ್ತಿತ್ತು.



ಮನೆಯ ಹಿಂದೆ ಕೊಟ್ಟಿಗೆಯಲ್ಲಿ, ಮನೆ ಮಗ್ಗುಲಲ್ಲಿ ಮತ್ತು ಮನೆ ಮುಂದೆ ಆಕಳು ಎಮ್ಮೆಗಳ ಬಳಗ. ಒಂದಲ್ಲೊಂದು ಕರು ಹಾಕುತ್ತಿದ್ದ ಕಾರಣ ಗಿಣ್ಣ ಮಾಡಿ, ದೇವರಿಗೆ ಎಡೆ ಇಟ್ಟು ತಿನ್ನುವ ಖುಷಿ. ಅಕ್ಕಪಕ್ಕದ ಮನೆಗಳಿಗೆಲ್ಲಾ ಹಂಚಿಯೂ ಸಮೃದ್ಧವಾಗಿ ಗಿಣ್ಣ ತಿನ್ನುತ್ತಿದ್ದ ಸಂತೋಷದ ಕ್ಷಣಗಳು. ಅವ್ವ (ಅಜ್ಜಿ) ಕರೆದುಕೊಟ್ಟ ನೊರೆ ನೊರೆ ಹಾಲನ್ನು ಹೋಟೆಲ್‌ಗಳಿಗೆ, ಪಕ್ಕದ ಮನೆಗಳಿಗೆ ಕೊಟ್ಟು ಬರುವ ಜವಾಬ್ದಾರಿ ರಜೆ ಮುಗಿಸಿ ಬರುವವರೆಗೆ ನಮ್ಮದೇ. ಬಿಸಿಲು ಹತ್ತುವುದರೊಳಗಾಗಿ ಅವ್ವನ ಜೊತೆ ಮಜ್ಜಿಗೆ ಕಡೆದು ಸೇರುಗಟ್ಟಲೆ ಬೆಣ್ಣೆ ತಗೆಯುವ ಸಂಭ್ರಮ. ಆ ನಂತರ ಮಜ್ಜಿಗೆ ಹದ (ನೀರುಳ್ಳಿ, ಹಸಿಮೆಣಸು, ಕೊತ್ತಂಬರಿ ಸಣ್ಣದಾಗಿ ಹೆಚ್ಚಿ ಅಗತ್ಯಕ್ಕೆ ತಕ್ಕಂತೆ ಉಪ್ಪು ಬೆರಸಿ) ಮಾಡಿ, ಕುಡಿಯುವ ಆನಂದ. ದನಗಳು, ಎಮ್ಮೆಗಳನ್ನು ಮೇಯಿಸಿಕೊಂಡು ಬರಲು ಹೋದ ಬಳಿಕ ಅವುಗಳ ಕರುಗಳಿಗೆ ಬೇಸರವಾಗದಂತೆ ಅವುಗಳ ಮೈ ಸವರುವುದು, ಅವುಗಳ ಚಿನ್ನಾಟಕ್ಕೆ ಜೊತೆಯಾಗುವುದು, ಕುಡಿಯಲು ತಣ್ಣೀರಿಡುವುದು. ಸಂಜೆ ಕರುಗಳ ಅಮ್ಮಂದಿರು ಬರುವ ವೇಳೆಗೆ ಗೂಟಕ್ಕೆ ಕಟ್ಟಿರುತ್ತಿದ್ದೆವು. ಕೆಲವೊಂದು ಆಕಳು ಅಥವಾ ಎಮ್ಮೆಗೆ ನಮ್ಮ ಅವ್ವನೇ ಹಾಲು ಕರೆಯಬೇಕಾಗಿತ್ತು. ಅವ್ವ ಇಲ್ಲದಿದ್ದಾಗ ನಮ್ಮಪ್ಪ (ಅಜ್ಜ) ಅವ್ವನ ಸೀರೆ ಸುತ್ತಿಕೊಂಡು ಹಾಲು ಕರೆಯಬೇಕಾದ ಮೋಜಿನ ಪ್ರಸಂಗ ನೋಡಲು ಸಿಗುತಿತ್ತು. ಒಮ್ಮೊಮ್ಮೆ ದನ ಕಾಯುವವರು ಬರದಿದ್ದಾಗ ಮನೆಯ ದೊಡ್ಡವರ ಜೊತೆ ಊರಿಂದ ದೂರದ ಹುಲ್ಲುಗಾವಲಿಗೆ ಮೇಯಿಸಲು ಕರೆದೊಯ್ಯಬೇಕಾಗಿತ್ತು.

ದಾರಿಯಲ್ಲಿ ಸಿಗುತ್ತಿದ್ದ ಅತ್ತಿಹಣ್ಣು, ಕಾಕೀ ಹಣ್ಣು ನಾಲಗೆಗೆ ಸವಿ ಉಣಿಸುತ್ತಿದ್ದವು. ಕಾಲುವೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಈಜು ಕಲಿತವರು, ಈಜು ಬಾರದವರಿಗೆ ಈಜು ಕಲಿಸುತ್ತಿದ್ದರು. ಮೈ ತುಂಬಾ ಸಗಣಿ ಮಾಡಿಕೊಂಡ ಜಾನುವಾರುಗಳ ಮೈ ತೊಳೆದು, ಅವುಗಳನ್ನು ಹಗುರ ಮಾಡುತ್ತಿದ್ದೆವು. ವಾಪಾಸು ಮನೆಗೆ ಬಂದ ಬಳಿಕ, ಅವುಗಳಿಗೆ ಒಣ ಹುಲ್ಲು ಹಾಕಿ, ಸೊಳ್ಳೆ ಕಡಿಯದಂತೆ ರಾತ್ರಿ ತುಂಬಾ ಸಮಯದವರೆಗೆ ತೆಂಗಿನ ಸಿಪ್ಪೆಗಳಿಗೆ ಬೆಂಕಿ ಹಾಕಿ, ಅದರ ಮೇಲೆ ನೀರು ಸುರಿದು, ಹೊಗೆ ಎಬ್ಬಿಸುತ್ತಿದ್ದೆವು.

(ಮುಂದುವರೆಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248